# ಕನ್ನಡ ರಂಗಭೂಮಿಯ ಪರಂಪರೆ ಮತ್ತು ಪ್ರಸ್ತುತ ಸ್ಥಿತಿ

**ಗೀತಾ ಕುಮಾರಿ ಟಿ.***

**DOI: https://doi.org/10.5281/zenodo.22106735**

**ABSTRACT**

ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ನಾಟಕ ಕಲೆ ಹಾಗೂ ಕನ್ನಡ ರಂಗಭೂಮಿಯ ಉಗಮ, ವಿಕಾಸ ಮತ್ತು ಇಂದಿನ ಸವಾಲುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಜನಪದ, ವೃತ್ತಿ ಮತ್ತು ಹವ್ಯಾಸಿ ಎಂದು ಮೂರು ವಿಭಾಗಗಳಲ್ಲಿ ಬೆಳೆದುಬಂದ ರಂಗಭೂಮಿಯು ಕೇವಲ ಮನರಂಜನೆಯ ಮಾಧ್ಯಮವಾಗಿರದೆ ಸಾಮಾಜಿಕ ಜಾಗೃತಿ ಮೂಡಿಸುವ ವೇದಿಕೆಯಾಗಿದೆ. ಪ್ರಸ್ತುತ ಡಿಜಿಟಲ್ ಯುಗದ ಆಕರ್ಷಣೆಗಳಿಂದಾಗಿ ನಾಟಕ ಕ್ಷೇತ್ರವು ಪ್ರೇಕ್ಷಕರು ಮತ್ತು ಕಲಾವಿದರ ಕೊರತೆಯನ್ನು ಎದುರಿಸುತ್ತಿದೆ. ಈ ಬಿಕ್ಕಟ್ಟನ್ನು ನಿವಾರಿಸಲು ಶಾಲಾ-ಕಾಲೇಜು ಮಟ್ಟದಲ್ಲಿ ನಾಟಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಗ್ರಾಮ ಮಟ್ಟದಲ್ಲಿ ರಂಗಮಂದಿರಗಳ ನಿರ್ಮಾಣ ಹಾಗೂ ಸರ್ಕಾರದ ಆರ್ಥಿಕ ಬೆಂಬಲ ಅತ್ಯಗತ್ಯ. ನಾಟಕವನ್ನು ಕೇವಲ ಕಲೆಯಾಗಿ ನೋಡದೆ, ಸ್ಕ್ರಿಪ್ಟ್ ರಚನೆ, ಬೆಳಕು ಸಂಯೋಜನೆ ಮತ್ತು ನಿರ್ದೇಶನದಂತಹ ವೃತ್ತಿಪರ ಕೌಶಲಾಧಾರಿತ ಉದ್ಯೋಗವಾಗಿ ಯುವಜನತೆ ಸ್ವೀಕರಿಸಿದರೆ ಕನ್ನಡ ರಂಗಭೂಮಿಯ ಭವಿಷ್ಯ ಮತ್ತಷ್ಟು ಉಜ್ವಲವಾಗಲಿದೆ ಎಂಬ ಆಶಯವನ್ನು ವ್ಯಕ್ತಪಡಿಸಲಾಗಿದೆ.

**KEYWORDS**: ರಂಗಭೂಮಿಯ ಪರಂಪರೆ, ವೃತ್ತಿ ಮತ್ತು ಹವ್ಯಾಸಿ ನಾಟಕ, ರಂಗಪ್ರಯೋಗ, ನಾಟಕ ಸಾಹಿತ್ಯ, ರಂಗಭೂಮಿ ಮತ್ತು ಉದ್ಯೋಗ.

* **ಡಾ. ಗೀತಾ ಕುಮಾರಿ ಟಿ.**, ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ (ಸ್ವಾಯತ್ತ), ಪುತ್ತೂರು. ದ.ಕ.

**ಪ್ರಸ್ತಾವನೆ:**

ಭಾರತದ ಪ್ರಾಚೀನ ಕಲೆಗಳಲ್ಲಿ ನಾಟಕವೂ ಒಂದು. ನಾಟಕ ಎಂದರೆ ರಂಗದ ಮೇಲೆ ಅಭಿನಯಿಸಬಹುದಾದ ಒಂದು ಸಾಹಿತ್ಯ ಪ್ರಕಾರ. ಆದರೂ ನಾಟಕವನ್ನು ಒಂದು ಸಾಹಿತ್ಯ ಕೃತಿಯಾಗಿ ಓದಿ ಆಸ್ವಾದಿಸಬಹುದು. ತರಗತಿಯಲ್ಲಿ ಪಠ್ಯ ರೂಪದಲ್ಲೂ ಅಧ್ಯಯನ ಯೋಗ್ಯವಾಗಿದೆ. ವಿದ್ಯಾರ್ಥಿಗಳು ಅಥವಾ ಒಂದು ತಂಡ ಯಾವುದೇ ವೇಷ, ಪರಿಕರಗಳಿಲ್ಲದೆ ಪ್ರದರ್ಶಿಸಲೂ ಸಾಧ್ಯವಾಗುತ್ತದೆ. ನಾಟಕವನ್ನು ಸಾಹಿತ್ಯವಾಗಿ ನೋಡುವಾಗ ಕವಿಯ ಮನೋಧರ್ಮ ಮತ್ತು ಆಶಯ ಮುಖ್ಯವಾದರೆ, ರಂಗದಲ್ಲಿ ಇದನ್ನು ಅಭಿವ್ಯಕ್ತಿಸಲು ಸಮಷ್ಟಿಯ ಪ್ರಯತ್ನ ಮುಖ್ಯವಾಗುತ್ತದೆ.

**ನಾಟಕದ ಹಿನ್ನೆಲೆ:**

ತ್ರೇತಾಯುಗದಲ್ಲಿ ಜನರು ಕಾಮ–ಕ್ರೋಧಗಳಿಗೆ ಒಳಗಾದ ಹೊತ್ತಿನಲ್ಲಿ ಇಂದ್ರಾದಿ ದೇವತೆಗಳು ಬ್ರಹ್ಮನನ್ನು ಕುರಿತು ದೃಶ್ಯ–ಶ್ರವ್ಯ ಸಾಧ್ಯವಾದ ಕ್ರೀಡೆಯನ್ನು ಸೃಷ್ಟಿಸಲು ಬೇಡಿಕೊಂಡರು. ಬ್ರಹ್ಮನು ಋಗ್ವೇದದ ಪಾಠ್ಯ, ಯಜುರ್ವೇದದ ಅಭಿನಯ, ಸಾಮವೇದದ ಸಂಗೀತ, ಅಥರ್ವವೇದದ ರಸ ತೆಗೆದುಕೊಂಡು ಪಂಚಮವೇದವಾದ ನಾಟ್ಯವನ್ನು ನಿರ್ಮಿಸಿದನು ಎಂದು ಭರತನ ನಾಟ್ಯಶಾಸ್ತ್ರದಲ್ಲಿ ಇದರ ಹಿನ್ನೆಲೆಯನ್ನು ಹೇಳಲಾಗಿದೆ.

ಕನ್ನಡದಲ್ಲಿ ರಂಗಭೂಮಿ ಮತ್ತು ನಾಟಕಗಳ ಪ್ರಾಚೀನತೆ ಒಂಭತ್ತನೇ ಶತಮಾನದಷ್ಟು ಹಿಂದೆ ಹೋಗುತ್ತದೆ. ಆ ಕಾಲದಲ್ಲಿ ಸಾಹಿತ್ಯೋಚಿತ ನಾಟಕಗಳು ಇದ್ದವೆಂಬುದಕ್ಕೆ ಸಾಕ್ಷಿಯಾಗಿ ಪಗರಣ ಎಂಬ ಸಾಹಿತ್ಯ ರೂಪದ ಉಲ್ಲೇಖ ದೊರೆಯುತ್ತದೆ. ದೃಶ್ಯಕಾವ್ಯವಾದ ರೂಪಕದ ಒಂದು ಪ್ರಭೇದವಾದ ಇದು ಪ್ರಾಚೀನ ರಂಗಭೂಮಿಯ ಮಾಹಿತಿಯನ್ನು ಕೊಡುತ್ತದೆ.

**ರಂಗಭೂಮಿಯ ವಿಧಗಳು:**

ರಂಗಭೂಮಿಯಲ್ಲಿ ಜನಪದ ರಂಗಭೂಮಿ, ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಎಂದು ಸಾಮಾನ್ಯವಾಗಿ ಮೂರು ವಿಧಗಳನ್ನು ಗುರುತಿಸಲಾಗಿದೆ.

**ಜನಪದ ರಂಗಭೂಮಿ:**

ಪ್ರದರ್ಶನ ಕಲೆಯಾಗಿ ಜನಪದ ರಂಗಭೂಮಿಗೆ ಬಹು ಹಿಂದಿನಿಂದಲೂ ಅಸ್ತಿತ್ವವಿರುವುದನ್ನು ಕಾಣಬಹುದು. ಸಾಹಿತ್ಯಕ ನಾಟಕದಂತೆ ಇದಕ್ಕೆ ಒಂದು ಕೃತಿರೂಪ ಇಲ್ಲ. ನಾಟಕ ಸಾಹಿತ್ಯವು ಬರವಣಿಗೆ, ಓದುವಿಕೆ ಮತ್ತು ಪ್ರಯೋಗಗಳನ್ನು ಒಳಗೊಂಡರೆ ಜನಪದ ಪ್ರಯೋಗವು ಅದಕ್ಕಿಂತ ಭಿನ್ನವಾದುದು. ರಾಜರ ಆಸ್ಥಾನದಲ್ಲಿ ಬೆಳೆದ ಸಾಹಿತ್ಯೋಚಿತ ನಾಟಕಕ್ಕಿಂತ ಭಿನ್ನವಾಗಿ ಸಾಮಾನ್ಯ ಜನರ ಧಾರ್ಮಿಕ ಆಚರಣೆಯ ಅಂಗವಾಗಿ ಜನಪದ ರಂಗಭೂಮಿ ಬೆಳೆದುಬಂದಿದೆ. ವಿವಿಧ ಜನಪದ ಪ್ರಕಾರಗಳು, ಪ್ರದರ್ಶನ ಕಲೆಗಳು, ಯಕ್ಷಗಾನ ತಾಳಮದ್ದಲೆ ಮೊದಲಾದವು ಜನಪದ ರಂಗಭೂಮಿಯನ್ನು ಬೆಳೆಸಿದ್ದಲ್ಲದೆ, ಕನ್ನಡ ರಂಗಭೂಮಿ ವ್ಯಾಪಕವಾಗಿ ಬೆಳೆಯಲು ಪ್ರೇರಣೆ ನೀಡಿವೆ.

**ವೃತ್ತಿ ರಂಗಭೂಮಿ:**

ವೃತ್ತಿ ರಂಗಭೂಮಿಗೆ ಒಂದು ಶತಮಾನಕ್ಕಿಂತಲೂ ಹೆಚ್ಚು ಇತಿಹಾಸವಿದೆ. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದಲೇ ನಾಟಕಕ್ಕೆ ರಾಜಾಶ್ರಯ ದೊರೆತಿರುವುದು ಕಂಡುಬರುತ್ತದೆ. ಮೈಸೂರಿನ ಶ್ರೀ ಶಾಕುಂತಲ ಕರ್ಣಾಟಕ ನಾಟಕ ಸಭಾ, ಗುಬ್ಬಿ ಕಂಪನಿಯ ನಾಟಕಗಳು ಆ ಕಾಲದಲ್ಲೇ ಜನಮನ್ನಣೆ ಗಳಿಸಿದ್ದವು. ವಸ್ತು ಯಾವುದೇ ಇದ್ದರೂ ಸಂಗೀತ, ನೃತ್ಯ ಮತ್ತು ಸೀನರಿಗಳು ನಾಟಕ ಪ್ರದರ್ಶನದ ಪ್ರಮುಖ ಅಂಶಗಳು. ಈ ಅಂಶಗಳನ್ನು

ಒಳಗೊಂಡ ವ್ಯವಸ್ಥಿತ ಮಂಡಳಿಗಳು ನಾಟಕ ಪ್ರದರ್ಶನದಿಂದ ಸಂಪಾದಿಸಿ ಬದುಕು ಸಾಗಿಸುತ್ತಿದ್ದರು. ಮುಂದೆ ಚಲನಚಿತ್ರದ ಆರಂಭದೊಂದಿಗೆ ವೃತ್ತಿ ರಂಗಭೂಮಿ ಜೀವಂತಿಕೆಯನ್ನು ಕಳೆದುಕೊಂಡಿತು.

**ಹವ್ಯಾಸಿ ರಂಗಭೂಮಿ:**

ನಾಟಕಕ್ಕಿಂತ ಅಭಿನಯ, ನಟನಿಗಿಂತ ಸಂಗೀತಕ್ಕೆ ಪ್ರಾಮುಖ್ಯತೆ ಬಂದಲ್ಲಿಂದ ಹವ್ಯಾಸಿ ರಂಗಭೂಮಿ ಬೆಳವಣಿಗೆ ಆಯಿತು. ಕಾಲಾನುಕ್ರಮದಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ಸಾಕಷ್ಟು ಸುಧಾರಣೆಯಾಯಿತು. ನೀನಾಸಂ, ರಂಗಾಯಣದಂತಹ ಪ್ರಮುಖ ಹವ್ಯಾಸಿ ರಂಗ ತಂಡಗಳು ವೈಚಾರಿಕ ಪ್ರಜ್ಞೆಯನ್ನು ನಾಟಕದಲ್ಲಿ ಅಳವಡಿಸಿಕೊಂಡ ಬಗೆ ಮೆಚ್ಚುವಂತದ್ದು.

**ಕನ್ನಡದಲ್ಲಿ ನಾಟಕ ಸಾಹಿತ್ಯ:**

ಕನ್ನಡದಲ್ಲಿ ನಾಟಕ ಪ್ರಕಾರ ಹುಟ್ಟಿದ್ದು ಸಂಸ್ಕೃತ ಪ್ರಭಾವದಿಂದ. ಆದರೆ ಕನ್ನಡ ಸಾಹಿತ್ಯದಲ್ಲಿ ನಾಟಕ ಒಂದು ಪ್ರತ್ಯೇಕ ರೂಪವಾಗಿ ಕಾಣಿಸಿಕೊಂಡದ್ದು ನವೋದಯ ಸಂದರ್ಭದಲ್ಲಿ. ಜನಪದ ನಾಟಕ ಬಿಟ್ಟರೆ ಕನ್ನಡ ನಾಟಕಗಳು ಜನ್ಮತಾಳಿದ್ದು ಇಪ್ಪತ್ತನೆಯ ಶತಮಾನದಲ್ಲಿ ಇಂಗ್ಲಿಷ್ ಪ್ರಭಾವದಿಂದ. ಹಿಂದೆ ನಾಟಕ ಎನ್ನುವ ಪ್ರಕಾರದ ಸಾಹಿತ್ಯವೇ ಇರಲಿಲ್ಲ, ಆದರೆ ನಾಟಕ ಪ್ರಯೋಗ ಮಾತ್ರ ಇತ್ತು ಎಂದ ಕೆ.ವಿ. ಸುಬ್ಬಣ್ಣ ಅವರ ಮಾತನ್ನು ಬಿ.ಟಿ. ದೇಸಾಯಿ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.[1] ಇಂದಿಗೂ ನಿಜವಾದ ರಂಗಭೂಮಿ ಎಂದರೆ ಜನಪದ ರಂಗಭೂಮಿ ಮತ್ತು ಕಂಪನಿ ನಾಟಕಗಳು. ಈ ನಾಟಕಗಳಿಗೆ ಸ್ಕ್ರಿಪ್ಟ್ ಇರುತ್ತದೆಯೇ ಹೊರತು ನಾಟಕವೆಂಬ ಸಾಹಿತ್ಯ ಕೃತಿ ಅಲ್ಲ ಎಂದು ಹೇಳಿರುವುದೂ ಸಮಂಜಸವೇ ಆಗಿದೆ.

**ನಾಟಕ ಮತ್ತು ರಂಗಪ್ರಯೋಗ:**

ಕನ್ನಡದ ಸಂದರ್ಭದಲ್ಲಿ ನಾಟಕ ಸಾಹಿತ್ಯ ಮತ್ತು ರಂಗ ಪ್ರಯೋಗ ಒಂದು ನಾಣ್ಯದ ಎರಡು ಮುಖಗಳಂತೆ ಪರಸ್ಪರ ಜೊತೆಯಾಗಿ ಸಾಗುತ್ತವೆ. ಒಂದು ಒಳ್ಳೆಯ ವಸ್ತುವನ್ನು ಹೊಂದಿರುವ ನಾಟಕ ಪಠ್ಯವು ಜನರನ್ನು ತಲುಪಬೇಕಾದರೆ ರಂಗಪ್ರಯೋಗ ಅವಶ್ಯ. ರಂಗದಲ್ಲಿ ನಾಟಕವು ವಿಜೃಂಭಿಸಬೇಕಾದರೆ ನಾಟಕ ಕೃತಿ ಸೊಗಸಾಗಿರಬೇಕು. ನಾಟಕಕಾರನಿಗೆ ನಾಟಕ ರಚನೆ ಎಂಬುದು ಪ್ರತಿಭಾ ಪ್ರದರ್ಶನಕ್ಕೆ ಇರುವ ಅವಕಾಶ. ಆದರೆ ಆತನ ಜೀವನಕ್ಕೆ ಇದು ದಾರಿಯಾಗುವುದು ಬಹಳ ಕಡಿಮೆ. ನಾಟಕ ಕೃತಿ ರಚನೆಯಲ್ಲಿ ಆತನ ಮನೋಧರ್ಮವು ಆಶಯದ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ವೃತ್ತಿ ನಿರತ ಕಲಾವಿದರಿಗೆ ರಂಗಭೂಮಿಯು ಜೀವನ ನಿರ್ವಹಣೆಗೆ ಸಹಾಯಕವಾಗಿದ್ದನ್ನು ಮರೆಯುವಂತಿಲ್ಲ. ಇಲ್ಲಿ ಹಣ ಕೊಟ್ಟು ನಾಟಕ ನೋಡುವ ಪ್ರೇಕ್ಷಕ ವರ್ಗ ನಿರ್ಮಾಣವಾಯಿತು. ನಾಟಕ ಕೃತಿಯನ್ನು ಅಕ್ಷರಸ್ಥರು ಮಾತ್ರ ಓದಲು ಸಾಧ್ಯವಾದರೆ ರಂಗ ಪ್ರದರ್ಶನವು ಅನಕ್ಷರಸ್ಥರಿಗೂ ಅದರ ಲಾಭ ಲಭಿಸುವಂತೆ ಮಾಡಿದ್ದು ವಿಶೇಷ.

ಒಂದು ನಾಟಕವು ರಂಗಕ್ಕೆ ಬರುವಾಗ ಅಲ್ಪಸ್ವಲ್ಪ ವ್ಯತ್ಯಾಸಗಳಾಗುವುದು ಸಹಜ. ಪ್ರದರ್ಶನದಿಂದ ಪ್ರದರ್ಶನಕ್ಕೆ ವ್ಯತ್ಯಾಸವಾಗಲೂಬಹುದು. ನಿರ್ದೇಶಕರು ಬೇರೆಯಾದಾಗ ಅಥವಾ ಕಲಾವಿದರು ಬೇರೆಯಾದಾಗಲೂ ವ್ಯತ್ಯಾಸವಾಗುತ್ತವೆ. ನಾಟಕ ಸಾಹಿತ್ಯಕ್ಕೆ ನಾಟಕಕಾರನೊಬ್ಬನೇ ಹೊಣೆಯಾದರೆ, ಅದು ರಂಗಕ್ಕೆ ಬರುವಾಗ ಅವನೊಂದಿಗೆ ನಿರ್ದೇಶಕ, ನಟರು, ತಾಂತ್ರಿಕ ವರ್ಗದವರೂ ಮುಖ್ಯರಾಗುತ್ತಾರೆ. ಇತ್ತೀಚೆಗೆ ನಾಟಕಕಾರನಿಗಿಂತ ನಿರ್ದೇಶಕನೇ ಹೆಚ್ಚು ಪ್ರಸ್ತುತನೆನಿಸಿಕೊಂಡಿದ್ದಾನೆ.

**ಆಧುನಿಕ ನಾಟಕದ ವೈವಿಧ್ಯತೆ:**

ಕಳೆದ ಒಂದು ಶತಮಾನದಲ್ಲಿ ಕನ್ನಡ ನಾಟಕಗಳ ಇತಿಹಾಸ ಸಮೃದ್ಧವಾಗಿದೆ. ಆಧುನಿಕ ಕನ್ನಡ ನಾಟಕ ಆರಂಭವಾದದ್ದು ಕೈಲಾಸಂ, ಶ್ರೀರಂಗ ಮೊದಲಾದವರಿಂದ. ಆಧುನಿಕ ರಂಗಭೂಮಿಯಲ್ಲಿ ನಾಟಕಕಾರನು ಮುಖ್ಯವಾದರೂ ನಿರ್ದೇಶಕನಿಗೆ ಹೆಚ್ಚಿನ ಮನ್ನಣೆ ಇದೆ. ವೃತ್ತಿ ರಂಗಭೂಮಿಯಲ್ಲಿ ಬಹುತೇಕ ಪೌರಾಣಿಕ ಮತ್ತು ಐತಿಹಾಸಿಕ ಕಥಾನಕಗಳು ಪ್ರದರ್ಶನಗೊಂಡರೆ ಹವ್ಯಾಸಿ ರಂಗಭೂಮಿಯಲ್ಲಿ ಸಾಮಾಜಿಕ ವಸ್ತುವೂ ಕೂಡ ಜನಮನ್ನಣೆ ಗಳಿಸಿದೆ.

ಭಾವಾಭಿವ್ಯಕ್ತಿಗೆ ವಿಶೇಷ ಪ್ರಾಧಾನ್ಯ ಇರುವ ಆಧುನಿಕ ನಾಟಕಗಳಲ್ಲಿ ಭಾಷಾಂತರ, ರೂಪಾಂತರ, ಗೀತ ನಾಟಕಗಳು, ಏಕಾಂಕಗಳು, ರುದ್ರ ನಾಟಕಗಳು, ಅಸಂಗತ ನಾಟಕಗಳು, ಬೀದಿ ನಾಟಕಗಳು, ತುಳು ನಾಟಕಗಳು, ಹಾಸ್ಯ ನಾಟಕಗಳು, ವಾಸ್ತವವಾದಿ ನಾಟಕಗಳು ಹೀಗೆ ಬೇರೆಬೇರೆ ತಾತ್ವಿಕ ಹಿನ್ನೆಲೆಯಲ್ಲಿ ಮೂಡಿಬಂದ ನಾಟಕಗಳು ಕೂಡ ಜನಮನ್ನಣೆ ಗಳಿಸಿವೆ. ರೇಡಿಯೋ ರೂಪಕವು ಪ್ರಸಾರ ನಾಟಕವಾಗಿದ್ದು ಅದು ಕೇವಲ ಶ್ರವ್ಯವಾಗಿದ್ದರೂ ಅದನ್ನೂ ರಂಗಭೂಮಿಯ ವ್ಯಾಪ್ತಿಗೆ ತರಬಹುದು ಎಂಬುದು ನನ್ನ ಅನಿಸಿಕೆ. ಅಲ್ಲಿ ರಂಗಸಜ್ಜಿಕೆ ಮತ್ತು ಅಭಿನಯಕ್ಕೆ ಆದ್ಯತೆಯಿಲ್ಲದಿದ್ದರೂ ಉತ್ತಮ ನಿರ್ದೇಶನದ ಅವಶ್ಯಕತೆಯಿದೆ. ಕಲಾವಿದರ ಸಂಭಾಷಣೆಯ ಏರಿಳಿತ, ಸಂಗೀತ ಇತ್ಯಾದಿಗಳು ನಾಟಕದ ಆಶಯಕ್ಕೆ ಪೂರಕವಾಗಿದ್ದಾಗ ಸನ್ನಿವೇಶವನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

**ನಾಟಕದ ವಸ್ತು:**

ನಾಟಕದ ಮೂಲ ಆಶಯ ಮನರಂಜನೆ ಮತ್ತು ಪರಂಪರೆಯ ಮೌಲ್ಯವನ್ನು ಅಭಿವ್ಯಕ್ತಿಸುವುದು. ಕನ್ನಡ ನಾಟಕಗಳು ತಂತ್ರ, ವಸ್ತು, ಭಾಷೆಗಳ ದೃಷ್ಟಿಯಿಂದ ಹೊಸತನವನ್ನು ಕಂಡುಕೊಳ್ಳಲು ನವೋದಯ ಕಾಲವು ಕಾರಣವಾಯಿತು. ನವ್ಯ ನಾಟಕಗಳಲ್ಲಿ ಕಾಣುವ ದುರಂತ ಪ್ರಜ್ಞೆ ವೈಯಕ್ತಿಕ ನೆಲೆಯದ್ದು. ಸಾಮಾಜಿಕ ಅರಿವಿನ ನಾಟಕಗಳು ಕೂಡ ವಿಶೇಷ ಗಮನಸೆಳೆಯುತ್ತವೆ. ಏಣಗೀ ಬಾಳಪ್ಪ, ಹಿರಣ್ಣಯ್ಯ ಮೊದಲಾದವರ ನಾಟಕಗಳು ಬಡತನ, ವಿಷಮ ವಿವಾಹ, ಶಿಕ್ಷಣ, ಬಡವರ ಶೋಷಣೆ ಇತ್ಯಾದಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ನಾಟಕಗಳನ್ನು ಪ್ರಸ್ತುತಪಡಿಸಿರುವುದನ್ನು ಗಮನಿಸಬಹುದು. ಪೌರಾಣಿಕ ಕಥೆಗಳ ಮೂಲಕ ಪರಂಪರಾಗತ ಜೀವನ ಮೌಲ್ಯಗಳ ಅನಾವರಣ, ಚಾರಿತ್ರಿಕ ಕಥೆಗಳ ಮೂಲಕ ಇತಿಹಾಸದ ಅರಿವು, ಸಾಮಾಜಿಕ ಸಂಗತಿಗಳ ಮೂಲಕ ವರ್ತಮಾನದ ಸಮಸ್ಯೆಗಳ ಕುರಿತು ಪ್ರಜ್ಞೆ ಮೂಡಿಸುವುದು ರಂಗಭೂಮಿಯ ಉದ್ದೇಶವಾಗಬೇಕು. ಈ ಹಿನ್ನೆಲೆಯಲ್ಲಿ ಮಾನವ ಸಮುದಾಯಗಳ ಕಲ್ಯಾಣ, ವೈಚಾರಿಕತೆಯನ್ನು ಬೆಳೆಸಿಕೊಂಡ ಯುವ ತಲೆಮಾರಿನ ನಿರ್ಮಾಣಕ್ಕೆ ರಂಗಭೂಮಿಯ ಕೊಡುಗೆಯಿರುವುದು ಶ್ಲಾಘನೀಯವಾದುದು.

**ರಂಗಭೂಮಿಯ ಪ್ರಸ್ತುತ ಸ್ಥಿತಿ:**

ಜನಪರವಾದ ಸಾಮಾಜಿಕ ರಂಗಭೂಮಿಯ ಉದಯ ಮತ್ತು ಅದರ ಮೂಲ ಉದ್ದೇಶಕ್ಕೆ ಅನುಗುಣವಾಗಿ ನಾಟಕದ ಅಭಿವ್ಯಕ್ತಿ ವಿಸ್ತಾರವಾದುದು ರಂಗಭೂಮಿಯ ಮುಖ್ಯ ಸಾಧನೆ. ಕಲಾತ್ಮಕವಾಗಿ ಶ್ರೇಷ್ಠ ನಾಟಕ ಬರಲು ಇಂಥ ಪರಿಸರ ಕಾರಣವಾಗುತ್ತದೆ. ಆದರೆ ವರ್ತಮಾನದಲ್ಲಿ ವೃತ್ತಿ– ಹವ್ಯಾಸಿ ರಂಗಭೂಮಿಗಳ ಅಂತರ ಹೆಚ್ಚಾಗಿದೆ. ಜನಪದ ರಂಗಭೂಮಿ, ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಗಳ ಅಂತರ ಕಡಿಮೆಯಾದರೆ ಜನಪರ ರಂಗಭೂಮಿ ಇನ್ನಷ್ಟು ವಿಕಾಸಗೊಳ್ಳುತ್ತದೆ.[2]

ನಾಟಕ ಒಂದು ಜೀವಂತ ಕ್ರಿಯೆ. ಇಲ್ಲಿ ಅಭಿನಯಕ್ಕೆ ಆದ್ಯತೆಯಿದ್ದು ವಿಶಿಷ್ಟ ಭಾಷೆ ಮತ್ತು ಆಶಯಗಳು ನಾಟಕವನ್ನು ಗೆಲ್ಲಿಸುತ್ತವೆ. ನಾಟಕದ ಮೂಲ ಆಶಯಗಳನ್ನು ತಾರದೆ ನಾಟಕವು ರಂಗದಲ್ಲಿ ಸಫಲವಾಗುವುದಿಲ್ಲ. ಆದರೆ ಇಂದು ಸತ್ವ ಮತ್ತು ಕ್ರಿಯಾಶೀಲತೆಯುಳ್ಳ ನಾಟಕಗಳು ಕಡಿಮೆಯಾಗಿವೆ. ರಂಗಭೂಮಿಗಾಗಿ ಬರೆದ ನಾಟಕಕ್ಕೆ ಪ್ರದರ್ಶನದಲ್ಲೇ ಪರಿಪೂರ್ಣತೆ ಸಿಗುವುದು. ಆದ್ದರಿಂದ ವೃತ್ತಿಪರ ರಂಗಭೂಮಿಗೆ ಒಳ್ಳೆಯ ನಿರ್ದೇಶಕರ ಅವಶ್ಯಕತೆ ಇದೆ. ಇಂದು ವೃತ್ತಿ ರಂಗಭೂಮಿ ಅವನತಿಯತ್ತ ಸಾಗಿದೆ. ಹವ್ಯಾಸಿ ತಂಡಗಳು ಕೂಡ ಪ್ರೇಕ್ಷಕರ ಕೊರತೆಯನ್ನು ಎದುರಿಸುತ್ತಿವೆ. ಇಂದು ನಾಟಕಕಾರ ಮುಖ್ಯವಲ್ಲದೆ ಹೋದರೂ ನಾಟಕದ ಆಶಯ ಮುಖ್ಯವಾಗಿದೆ. ಪ್ರೇಕ್ಷಕರ ಅಭಿರುಚಿಯನ್ನು ಕೂಡ ಗಮನಿಸಬೇಕು. ಒಂದು ಶಿಸ್ತಿಗೆ ಒಳಪಟ್ಟ ಪ್ರಯೋಗ ಖಂಡಿತವಾಗಿ ಯಶಸ್ವಿಯಾಗುತ್ತದೆ ಎಂಬುದನ್ನು ಮರೆಯಬಾರದು.

ನಾಟಕ ಸಾಹಿತ್ಯ ಮತ್ತು ರಂಗಪ್ರದರ್ಶನ ಉಳಿಯಬೇಕಾದರೆ ಓದುಗರು ಮತ್ತು ಪ್ರೇಕ್ಷಕರು ಈ ಕುರಿತು ವಿಚಾರಮಾಡಬೇಕಾಗಿದೆ. ರಂಗ ಪ್ರಯೋಗಗಳು ವಿಮರ್ಶೆಗೆ ಒಳಪಟ್ಟಾಗ ಹೆಚ್ಚು ಮೌಲ್ಯಯುತ ವಸ್ತುವನ್ನು ಹೊಂದಿದ ನಾಟಕ ಪ್ರದರ್ಶನಕ್ಕೆ ಅವಕಾಶವಿದೆ. ಆಕರ್ಷಕ ರಂಗ ಸಜ್ಜಿಕೆ, ನೈಜ ಮಾದರಿಯ ವಿನ್ಯಾಸ, ವಿಶೇಷ ತರಬೇತಿಯ ಅಭಿನಯ ಮತ್ತು ಮಾತುಗಾರಿಕೆಗೆ ಪ್ರೇಕ್ಷಕರರನ್ನು ಹಿಡಿದಿಡಲು ಸಾಧ್ಯವಾಗುತ್ತದೆ.

ನಾಟಕವೊಂದು ಭಾಷೆಯ ಮೂಲಕ ನಡೆಯಬೇಕಾದ ಸೃಜನಶೀಲ ಕ್ರಿಯೆ. ಓದುವುದಕ್ಕಿಂತ ನೋಡುವುದು ಹೆಚ್ಚು ಅರ್ಥಗಳನ್ನು ಹೊಮ್ಮಿಸುತ್ತದೆ. ಆದ್ದರಿಂದ ರಂಗಪ್ರಯೋಗದಲ್ಲಿ ಭಾಷಾ ಬಳಕೆಗೂ ಮಹತ್ವವಿದೆ. ಸ್ಪಷ್ಟ ಉಚ್ಚಾರ, ಸನ್ನಿವೇಶ ಕಲ್ಪನೆಯ ಕೌಶಲ ನಿರ್ದೇಶಕನಷ್ಟೇ ಕಲಾವಿದರಲ್ಲೂ ಇರಬೇಕಾಗಿದೆ. ಸಿನಿಮಾದಂತೆ ಇಲ್ಲಿ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಇಲ್ಲದಿರುವುದರಿಂದ ಸೂಕ್ತ ತರಬೇತಿ ಮತ್ತು ಪ್ರತಿ ಪ್ರದರ್ಶನವೂ ಇಲ್ಲಿ ಮುಖ್ಯವಾಗುತ್ತದೆ.

ಭದ್ರವಾದ ರಂಗ ಸಂಪ್ರದಾಯದ ಕೊರತೆ ಮತ್ತು ರಂಗ ಸಂಕೇತಗಳ ಅಭಾವ ವರ್ತಮಾನದಲ್ಲಿ ಕಾಡುತ್ತಿವೆ. ಪಶ್ಚಿಮದ ಪ್ರಭಾವದಿಂದ ನಮ್ಮ ತಲೆಮಾರಿನ ಜನರ ಪ್ರಜ್ಞೆಯಲ್ಲಿ ಬಿಟ್ಟ ಬಿರುಕು ನಾಟಕದ ಪ್ರದರ್ಶನ ಮತ್ತು ವೀಕ್ಷಣೆಯನ್ನು ವಿರಳವಾಗಿಸಿದೆ. ನಾಟಕದ ಕುರಿತು ಯುವ ತಲೆಮಾರಿಗೆ ಪ್ರೋತ್ಸಾಹದ ಕೊರತೆ, ನಾಟಕ ಸಾಹಿತ್ಯ ಮತ್ತು ರಂಗಭೂಮಿಯ ಗಂಭೀರ ವಿಮರ್ಶೆಯ ಅಭಾವವೂ ಇದಕ್ಕೆ ಕಾರಣವಾಗಿದೆ. ತಂತ್ರಜ್ಞಾನಗಳ ಆವಿಷ್ಕಾರದ ಸಂಕ್ರಮಣ ಕಾಲವಿದು. ಟಿವಿ, ಕಂಪ್ಯೂಟರ್, ಮೊಬೈಲ್ ಮೊದಲಾದ ಆಕರ್ಷಣೆಗಳಲ್ಲಿ ಕಳೆದುಹೋಗುತ್ತಿರುವ ಯುವ ತಲೆಮಾರು ಮತ್ತೆ ನಾಟಕದಂತಹ ಸೃಜನಶೀಲ ಅಭಿವ್ಯಕ್ತಿಗೆ ತೆರೆದುಕೊಳ್ಳುವಂತೆ ಮಾಡಬೇಕಾಗಿದೆ.

**ಸಾಧ್ಯತೆಗಳು:**

ಇಂದಿನ ಮಕ್ಕಳ ತಲೆಮಾರು ನಾಟಕ ವೀಕ್ಷಣೆ, ನಾಟಕದಲ್ಲಿ ಅಭಿನಯಿಸುವುದನ್ನು ಕಲೆಯಾಗಿ, ಪ್ರತಿಭೆಯಾಗಿ ರೂಢಿಸಿಕೊಳ್ಳಬೇಕು. ಇತ್ತೀಚಿನ ವರ್ಷಗಳಲ್ಲಿ ಶಾಲೆ, ಕಾಲೇಜುಗಳಲ್ಲಿ ವಾರ್ಷಿಕೋತ್ಸವದಲ್ಲಿ ಮಕ್ಕಳ ನಾಟಕಗಳು ಕಣ್ಮರೆಯಾಗಿವೆ. ಕೇವಲ ನೃತ್ಯಗಳಲ್ಲೇ ಕಾರ್ಯಕ್ರಮ ಮುಗಿಯುವುದು ಖೇದಕರ. ಮಕ್ಕಳ ನಾಟಕಗಳನ್ನು ಬರೆದ ನಾಟಕಕಾರರು ಹಲವರು ನಮ್ಮಲ್ಲಿದ್ದಾರೆ. ಅವುಗಳು ಸಶಕ್ತವಾಗಿ ರಂಗಕ್ಕೆ ಬರಬೇಕಾಗಿದೆ. ಆದ್ದರಿಂದ ಮಕ್ಕಳ ತಂಡಕ್ಕೆ ತರಬೇತಿ ನೀಡಿ ವಾರ್ಷಿಕೋತ್ಸವದಲ್ಲಿ ಪ್ರದರ್ಶನ, ಸ್ಪರ್ಧೆಯನ್ನು ಏರ್ಪಡಿಸುವುದು

ಮುಂತಾದವುಗಳ ಮೂಲಕ ವಿದ್ಯಾರ್ಥಿ ತಲೆಮಾರಿನಲ್ಲಿ ಅಭಿನಯದ ಕೌಶಲವನ್ನೂ ಅಭಿರುಚಿಯನ್ನೂ ಬೆಳೆಸಬಹುದು. ಇದರಿಂದ ನಾಟಕ ಕ್ಷೇತ್ರದಲ್ಲಿರುವ ಕಲಾವಿದರ ಕೊರತೆಯನ್ನು ನೀಗಬಹುದು. ಮಾತ್ರವಲ್ಲ, ಪ್ರಜ್ಞಾವಂತ ಪ್ರೇಕ್ಷಕರನ್ನೂ ತಯಾರಿಸಬಹುದು.

ನಾಟಕದಲ್ಲಿ ರಂಗಸಜ್ಜಿಕೆಯು ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟು ಇರಬೇಕು. ಅನಗತ್ಯವಾಗಿ ಭವ್ಯವಾದ ರಂಗಸಜ್ಜಿಕೆಯಿದ್ದು ನಟರು ಅದನ್ನು ಯಾವ ರೀತಿಯಲ್ಲಿಯೂ ಬಳಸಿಕೊಳ್ಳದಿದ್ದರೆ ಅದೊಂದು ಅಲಂಕಾರವೆನಿಸುತ್ತದೆ. ಹಿನ್ನೆಲೆ ಸಂಗೀತ ಅಥವಾ ಧ್ವನಿ ಸಂಯೋಜನೆಗೂ ಪ್ರಯೋಗವನ್ನು ಬಿಟ್ಟು ಸ್ವತಂತ್ರ ಅಸ್ತಿತ್ವವಿಲ್ಲ. ಪ್ರಯೋಗದ ಧಾಟಿಗೆ ಅನುಸಾರವಾಗಿ, ವಾತಾವರಣ ನಿರ್ಮಾಣಕ್ಕೆ ಸಹಕಾರಿಯಾಗಿ ಪರಿಣಾಮವನ್ನು ತೀವ್ರಗೊಳಿಸುವಂತಹ ಉತ್ತಮ ಹಿನ್ನೆಲೆ ಸಂಗೀತ ಅಥವಾ ಧ್ವನಿ ಸಂಯೋಜನೆ ನಾಟಕದ ಯಶಸ್ಸಿಗೆ ಕಾರಣವಾಗುತ್ತದೆ.

ತರಬೇತಿ ನೀಡಿ ನಾಟಕಕಾರರನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ಆದರೆ ಒಂದು ರಂಗ ಪ್ರದರ್ಶನವು ಕಲಾವಿದರನ್ನು ಸೃಷ್ಟಿ ಮಾಡುತ್ತದೆ. ದೂರದರ್ಶನ, ರೇಡಿಯೋ, ರಿಯಾಲಿಟಿ ಶೋಗಳಲ್ಲಿ ಮಕ್ಕಳ ತಂಡದಿಂದ ನಾಟಕ ಏರ್ಪಡಿಸಿದರೆ ಪ್ರತಿಭೆಯ ಅನಾವರಣವಾಗುವುದರ ಜೊತೆಗೆ ಉತ್ತಮ ಕಲಾವಿದರು ರೂಪುಗೊಳ್ಳುತ್ತಾರೆ. ಶಾಲೆ ಕಾಲೇಜುಗಳಲ್ಲಿ ಕನ್ನಡ, ಇಂಗ್ಲೀಷ್ ಅಥವಾ ಮತ್ತಾವುದೇ ಭಾಷೆಗಳನ್ನು ಕಲಿಸುವಾಗ ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನು ಬೆಳೆಸುವಂತಹ ಶ್ರೇಷ್ಠ ನಾಟಕಗಳನ್ನು ಪಠ್ಯವಾಗಿ ನಿಗದಿ ಮಾಡುವುದರಿಂದ ವಿದ್ಯಾರ್ಥಿಗಳು ಆಸಕ್ತಿಯಿಂದ ಸದಭಿರುಚಿಯನ್ನು ಬೆಳೆಸಿಕೊಳ್ಳಬಲ್ಲರು.

ಕನ್ನಡ ನಾಟಕಗಳ ಆಯ್ಕೆಯಲ್ಲಿ ನೆರವಾಗಬಲ್ಲ ಕೈಪಿಡಿಯೊಂದಿದ್ದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇಂತಹ ಕೈಪಿಡಿಯು ವಸ್ತು, ಪಾತ್ರ, ರಂಗಸಜ್ಜಿಕೆ ಮುಂತಾದ ದೃಷ್ಟಿಯಿಂದ ಅವರವರ ಅಭಿರುಚಿ, ಅಗತ್ಯ, ಮಿತಿಗನುಸಾರವಾಗಿ ವಿದ್ಯಾರ್ಥಿಗಳು ನಾಟಕಗಳನ್ನು ಆಯ್ಕೆ ಮಾಡಿಕೊಳ್ಳಲು ನೆರವಾಗುವಂತಹ ಮಾಹಿತಿಗಳನ್ನು ಒದಗಿಸಿದರೆ ವಿದ್ಯಾರ್ಥಿಗಳು ತಮ್ಮದೇ ತಂಡವವನ್ನು ರಚಿಸಿಕೊಂಡು ನಾಟಕ ಪ್ರದರ್ಶನ ನೀಡಲು ಸಹಾಯಕವಾಗುತ್ತದೆ. ಕಾಲೇಜು ರಂಗಭೂಮಿಯ ನಾಟಕ ಸ್ಪರ್ಧೆಗಳಲ್ಲಿ ಕನ್ನಡ ನಾಟಕಗಳ ಆಯ್ಕೆಯನ್ನು ಪ್ರೋತ್ಸಾಹಿಸುವಂತಹ ನೀತಿ ನಿಯಮಗಳಿರಬೇಕು. ಅನುವಾದಿತ ನಾಟಕಗಳ ಬದಲಿಗೆ ಕನ್ನಡ ನಾಟಕಗಳನ್ನೇ ಪ್ರಯೋಗಕ್ಕೆ ಬಳಸಿಕೊಳ್ಳುವುದು ಹೆಚ್ಚು ಸೂಕ್ತವಾದುದು. ಪ್ರಾಯೋಗಿಕತೆಯ ದೃಷ್ಟಿಯಿಂದ ಹೊಸ ಶೈಲಿಯನ್ನು ಅಳವಡಿಸುವ ಪ್ರಯತ್ನಗಳು ಪ್ರಶಂಸನೀಯವಾದರೂ ಅತಿರಂಜನೆಗಾಗಿ ಬಳಸುವ ಗಿಮಿಕ್ಸ್‌ಗಳು ನಾಟಕದ ಗಾಂಭೀರ್ಯತೆಗೆ ಧಕ್ಕೆ ತರುವುದನ್ನು ಗಮನದಲ್ಲಿಡಬೇಕು. ಹಿಂದೆ ನಾಟಕದ ಮಹಿಳಾ ಪಾತ್ರವನ್ನು ಪುರುಷರೇ ಅಭಿನಯಿಸುತ್ತಿದ್ದರೆ, ಪ್ರಸ್ತುತ ಮಹಿಳಾ ಪಾತ್ರವನ್ನು ಮಹಿಳೆಯರೇ ಅಭಿನಯಿಸುವುದು ಸಹಜವಾಗಿದೆ. ಮಹಿಳೆಯರದೇ ನಾಟಕ ತಂಡಗಳು ರಂಗ ಪ್ರದರ್ಶನ ನೀಡುತ್ತಿರುವುದಕ್ಕೆ ಉದಾಹರಣೆಗಳಿರುವುದು ನಾಟಕ ಕ್ಷೇತ್ರದ ಉತ್ತಮ ಬೆಳವಣಿಗೆಯಾಗಿದೆ.

ಪ್ರತಿಯೊಂದು ವಿದ್ಯಾ ಸಂಸ್ಥೆಯಲ್ಲಿ ರಂಗಮಂದಿರ ಇರುವಂತೆ ಪ್ರತಿ ಗ್ರಾಮದಲ್ಲೂ ಒಂದೊಂದು ರಂಗಮಂದಿರವಿದ್ದು ಊರಿನ ಆಸಕ್ತರು ಒಟ್ಟು ಸೇರಿ ತಂಡ ರಚಿಸಿಕೊಂಡು ನವರಾತ್ರಿ, ಗಣೇಶೋತ್ಸವದಂತಹ ಸಂದರ್ಭದಲ್ಲಿ ನಾಟಕವನ್ನು ಪ್ರದರ್ಶಿಸಲು ಅನುಕೂಲ ಮಾಡಿಕೊಡಬೇಕು. ಸರಕಾರದ ಪ್ರೋತ್ಸಾಹ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರ ಮತ್ತು ಅನುದಾನ, ಸ್ಪರ್ಧೆಗಳ ಏರ್ಪಾಡು, ನಾಟಕ ತರಬೇತಿ ಶಿಬಿರ ನಡೆಸುವುದು, ತರಬೇತಿ

ಪಡೆದವರಿಗೆ ಸ್ಕಾಲರ್ ಶಿಪ್ ನೀಡಿಕೆ, ನಾಟಕ ತರಬೇತಿ ನೀಡುವ ಸಂಸ್ಥೆಗಳ ನೋಂದಣೀಕರಣ ಮತ್ತು ಅವರಿಗೆ ಭತ್ಯೆ ನೀಡುವುದು, ಒಳ್ಳೆಯ ನಾಟಕ ಪ್ರದರ್ಶನಕ್ಕೆ ವಿದ್ಯಾರ್ಥಿಗಳನ್ನು ಶಾಲೆಯಿಂದಲೇ ಕರೆದೊಯ್ದು ವೀಕ್ಷಿಸಲು ಅನುವು ಮಾಡಿಕೊಡುವುದು, ದೂರದರ್ಶನದಲ್ಲಿ ಒಳ್ಳೆಯ ನಾಟಕ ಪ್ರಸಾರ ಮಾಡುವುದು, ಯೂಟ್ಯೂಬ್ ನಲ್ಲೂ ಸದಭಿರುಚಿಯ ನಾಟಕ ಪ್ರದರ್ಶನದ ವೀಡಿಯೋಗಳು ಲಭ್ಯವಾಗುವಂತೆ ಮಾಡುವುದು – ಹೀಗೆ ಹಲವು ವಿಧದಲ್ಲಿ ನಾಟಕ ಮತ್ತು ರಂಗಭೂಮಿಯ ವೈಭವವನ್ನು ಮರುಕಳಿಸಲು ಸಾಧ್ಯವಿದೆ.

ವೇದಿಕೆ ನಿರ್ಮಾಣದ ಖರ್ಚು, ರಂಗಪರಿಕರಗಳ ವೆಚ್ಚ, ಕಲಾವಿದರಿಗೆ ನೀಡುವ ಸಂಭಾವನೆ ಮುಂತಾದವನ್ನು ಭರಿಸಲು ಅಸಾಧ್ಯವಾದ ನಾಟಕ ತಂಡದ ಯಜಮಾನರು ಪ್ರದರ್ಶನವನ್ನು ಸ್ಥಗಿತಗೊಳಿಸುವ ಸಂಭವವಿರುವುದರಿಂದ ರಾಷ್ಟ್ರೀಯ ಹಬ್ಬಗಳು, ಜಾತ್ರೆ, ಪ್ರಮುಖ ಉತ್ಸವಗಳಂದು ಸರಕಾರದ ವತಿಯಿಂದಲೇ ನಾಟಕ ಪ್ರದರ್ಶನಗಳನ್ನು ಏರ್ಪಡಿಸಿ ಕಲಾವಿದರಿಗೆ ಗೌರವಧನ ನೀಡುವುದರಿಂದ ಕಲಾವಿದರಿಗೆ ಇನ್ನಷ್ಟು ಉತ್ಸಾಹ ದೊರೆಯುತ್ತದೆ. ಪ್ರೇಕ್ಷಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕಾದ ಅವಶ್ಯಕತೆಯೂ ಇದರೊಂದಿಗೆ ಇರುವುದನ್ನು ಗಮನಿಸಿಕೊಳ್ಳಬೇಕು.

ವರ್ತಮಾನದಲ್ಲಿ ಕೌಶಲಾಧಾರಿತ ಉದ್ಯೋಗಕ್ಕೂ ರಂಗಭೂಮಿ ಕ್ಷೇತ್ರದಲ್ಲಿ ವಿಪುಲ ಅವಕಾಶವಿರುವುದನ್ನು ಯುವ ಜನರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳು, ಕನ್ನಡವನ್ನು ಐಚ್ಛಿಕ ವಿಷಯವಾಗಿ ಕಲಿಯುವ ವಿದ್ಯಾರ್ಥಿಗಳು ಸ್ಕ್ರಿಪ್ಟ್ ಬರಹಗಾರರಾಗಿ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯತೆಯಿದೆ. ಛಾಯಾಗ್ರಹಣ, ಬೆಳಕಿನ ವ್ಯವಸ್ಥೆ, ರಂಗ ಪರಿಕರಗಳ ವಿಷಯದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳು ಆ ದಿಸೆಯಲ್ಲಿ ಮುಂದುವರಿಯಬಹುದು. ನಿರ್ದೇಶನದ ಜವಾಬ್ದಾರಿಯನ್ನೂ ಸಮರ್ಥವಾಗಿ ನಿರ್ವಹಿಸಲು ಅವಕಾಶವಿರುವುದರಿಂದ ಈ ಕ್ಷೇತ್ರದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಬೇಕಾಗಿದೆ. ಇದರಿಂದ ರಂಗಭೂಮಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇನ್ನಷ್ಟು ಗಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

**ಉಪಸಂಹಾರ:**

ರಂಗಭೂಮಿಯ ಚಟುವಟಿಕೆಗಳು ತೀರಾ ನಿರಾಶಾದಾಯಕವಾಗಿಲ್ಲ ಎಂಬುದು ಮಹತ್ವದ ವಿಚಾರ. ಸಂಕಷ್ಟದಲ್ಲೂ ಬದುಕುತ್ತಿರುವ ಕಲೆಯಿದು. ಮೂರು ಸಾವಿರ ವರ್ಷಗಳ ಇತಿಹಾಸ ಲಿಖಿತ ನಾಟಕಕ್ಕಿದೆ. ಕನ್ನಡದ ಸಂದರ್ಭದಲ್ಲೂ ಶತಮಾನಗಳ ಇತಿಹಾಸವಿರುವ ನಾಟಕ ಕ್ಷೇತ್ರ, ರಂಗಭೂಮಿ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಸಾಗಿದೆ.

ಇತ್ತೀಚೆಗೆ ರಂಗಪ್ರಯೋಗಗಳನ್ನು ಒಂದು ತಂತ್ರವನ್ನಾಗಿ ಅಭ್ಯಾಸಮಾಡಿ ಬಂದ ಪ್ರತಿಭಾವಂತರು, ದಿಗ್ದರ್ಶಕರು, ಕೌಶಲವನ್ನು ಹೊಂದಿದ ನಿರ್ದೇಶಕರು ಮತ್ತು ಕಲಾವಿದರು ರಂಗದಲ್ಲಿ ಹೊಸಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ತಂತ್ರಜ್ಞಾನದ ಬಳಕೆಯಿಂದ ವಿಭಿನ್ನ ಮಾದರಿಯ ರಂಗಸಜ್ಜಿಕೆ, ಆಕರ್ಷಕ ಬೆಳಕು ಇತ್ಯಾದಿಗಳ ಮೂಲಕ ಕೆಲವು ಒಳ್ಳೆಯ ಪ್ರಸ್ತುತಿ ಮಾಡುತ್ತಿರುವುದು ಅಭಿನಂದನಾರ್ಹ. ಇಂತಹ ಪ್ರತಿಭಾವಂತ ಕಲಾವಿದ ತರಬೇತಿ ಪಡೆದು ರಂಗದ ಮೇಲೆ ಬಂದಾಗ ಸಂಪೂರ್ಣ ಅಭಿವ್ಯಕ್ತಿ ಸಾಧ್ಯ. ನಿರ್ದೇಶಕನಿಗೆ ಸ್ವಂತ ಗ್ರಹಿಕೆ, ಕಲ್ಪನಾ ಸಾಮರ್ಥ್ಯ ಇದ್ದಾಗ, ಪ್ರಯೋಗದಲ್ಲಿ ಅನುಭವ ಶ್ರೀಮಂತಿಕೆ, ಅರ್ಥನಿರೂಪಣೆಯಲ್ಲಿ ಗಮನವಿದ್ದಾಗ ರಂಗಪ್ರಯೋಗವು ಯಶಸ್ವಿಯಾಗುತ್ತದೆ. ಪರಿಣಾಮವಾಗಿ ನಾಟಕಕಾರನೂ ಅತ್ಯುತ್ತಮ ಕೃತಿ ರಚನೆ ಮಾಡುವುದು ಸಾಧ್ಯವಾಗುತ್ತದೆ.

ನಾಟಕ, ನಿರ್ದೇಶನ, ಅಭಿನಯ ಪ್ರಶಸ್ತಿಗಾಗಿ ಅಲ್ಲ, ಜನ ಮೆಚ್ಚುಗೆಗೆ ಎಂಬ ನಿಲುವು ಇದ್ದಾಗ ಸಹಜವಾಗಿ ಜನರ ಮೆಚ್ಚುಗೆ ಗಳಿಸಿ ಪ್ರಶಸ್ತಿಗೂ ಅರ್ಹವಾಗುತ್ತದೆ. ಅಂತಹ ನಾಟಕ ಪ್ರದರ್ಶನಗಳ ನಿರೀಕ್ಷೆಯಲ್ಲಿರೋಣ.

**ಕೊನೆ ಟಿಪ್ಪಣಿಗಳು:**

1. ಶಿವರುದ್ರಪ್ಪ ಜಿ. ಎಸ್., (1978), ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ, ಪು.ಸಂ. 15
2. ಮರುಳಸಿದ್ದಪ್ಪ ಕೆ., (1986), ಕನ್ನಡ ನಾಟಕ ಸಮೀಕ್ಷೆ, ಬೆಂಗಳೂರು: ಪ್ರತಿಮಾ ನಾಟಕ ಪ್ರಕಾಶನ, ಪು.ಸಂ. 117

**ಪರಾಮರ್ಶನ ಗ್ರಂಥಗಳು:**


1. ಮರುಳಸಿದ್ದಪ್ಪ ಕೆ., (1983), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಪ್ರಿಂಟರ್ಸ್ ಪ್ರಕಾಶನ.
2. ಶಿವರುದ್ರಪ್ಪ ಜಿ. ಎಸ್., (1978), ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
3. ರಾಮನಾಥ್ ಎಚ್. ಕೆ., (1990), ಕನ್ನಡ ರಂಗಭೂಮಿಯ ವಿಕಾಸ, ಮೈಸೂರು: ಅಭಿನಯ ಪ್ರಕಾಶನ.
4. ಕೃಷ್ಣಯ್ಯ ಎಂ. ಎಚ್., (2009), ರಂಗಭೂಮಿ ಮತ್ತು ಸೌಂದರ್ಯ ಪ್ರಜ್ಞೆ, ಬೆಂಗಳೂರು: ಇಳಾ ಪ್ರಕಾಶನ.
5. ಮರುಳಸಿದ್ದಪ್ಪ ಕೆ., (1986), ಕನ್ನಡ ನಾಟಕ ಸಮೀಕ್ಷೆ, ಬೆಂಗಳೂರು: ಪ್ರತಿಮಾ ನಾಟಕ ಪ್ರಕಾಶನ.
6. ನಾಗಭೂಷಣ ಎ. ಆರ್. (ಸಂ.), (1981), ನಾಟಕ ರಚನೆ, ಶಿವಮೊಗ್ಗ: ಪರಿಸರ ಸಾಹಿತ್ಯ ಪ್ರಕಾಶನ.
7. ಶಾಮರಾಯರು ತ. ಸು., (1962), ಕನ್ನಡ ನಾಟಕ, ಮೈಸೂರು: ಗೀತಾ ಬುಕ್ ಹೌಸ್.